<u>ದಿನಾಂಕಃ 04-06-2022 ರಂದು ಪ್ರಮಾಣ ವಚನ ಭೋದಿಸಲಾಯಿತುಃ</u>

**<u>ಪಾರ್ಟಿ ಸವಾಲು ಎದುರುದಾರರ ಪರ ವಕೀಲರಿಂದ ಃ</u>**

ನಾನು, ನನ್ನ ಗಂಡ ಹಾಗೂ ಅತ್ತೆ ಮಾವನ ಜೊತೆ ಒಟ್ಟಿಗೆ ವಾಸಿಸುತ್ತಿದ್ದ ಬಗ್ಗೆ ಪಡಿತರ ಚೀಟಿಯನ್ನು ಹಾಜರುಪಡಿಸಿರುತ್ತೀರ ಎಂದರೆ ಹೌದು. ನನ್ನ ಇಬ್ಬರು ಮಕ್ಕಳಿಗೆ 19 ಮತ್ತು 20 ವಯಸ್ಸು. ನನ್ನ ಇಬ್ಬರು ಮಕ್ಕಳು ಓದುತ್ತಿರುತ್ತಾರೆ. ನನ್ನ ಗಂಡ ಅಬೀದುಲ್ಲಾಖಾನ್‌ರವರ ಬಳಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಮೃತಪಡುವ ಮುನ್ನ 10 ವರುಷಗಳ ಕಾಲ ಅಬೀದುಲ್ಲಾ ಖಾನ್ ಬಳಿ ಕೆಲಸ ಮಾಡುತ್ತಿದ್ದರು. ಅಪಘಾತವಾಗಿ 10 ವರುಷವಾಗಿದೆ. ನನ್ನ ಗಂಡ ಚಾಲಕ ಕೆಲಸ ಮಾಡುತ್ತಿದ್ದರು. ಅವರಿಗೆ ಮೃತಪಡುವ ಕಾಲಕ್ಕೆ ವಯಸ್ಸು 25 ವರುಷ ಇತ್ತು. ಈಗ ನನ್ನ ಅತ್ತೆ ಮಾವ ಇರುವುದಿಲ್ಲ, ಇಬ್ಬರೂ ಮೃತಪಟ್ಟಿರುತ್ತಾರೆ.

ಅಬೀದುಲ್ಲಾಖಾನ್‌ರವರು ಸೀತನಾಯಕನಹಳ್ಳಿ, ಹೊಸೂರು ರಸ್ತೆಗೆ ಬರುತ್ತದೆ, ಸದರಿ ಊರು ಕರ್ನಾಟಕಕ್ಕೆ ಸೇರುತ್ತದೆ. ನನ್ನ ಗಂಡ ಅಬೀದುಲ್ಲಾಖಾನ್‌ರವರ ಬಳಿ ಕೆಲಸ ಮಾಡುತ್ತಿದ್ದ ಬಗ್ಗೆ ಡಿ.ಎಲ್. ಇತ್ತು. ಆ ಕಾಲಕ್ಕೆ ತಿಂಗಳಿಗೆ 8 ಸಾವಿರ ರೂ. ಹಾಗೂ ದಿನಕ್ಕೆ 100 ರೂ. ಕೊಡುತ್ತಿದ್ದರು. ಅಪಘಾತವಾದ ನಂತರ ನಾನು ಅಬೀದುಲ್ಲಾಖಾನ್‌ರವರನ್ನು ಹೋಗಿ ಮಾತನಾಡಿಸಿರುವುದಿಲ್ಲ, ಅಪಘಾತವಾದ ದಿನ ನನ್ನ ಗಂಡ ಚಾಲನೆ ಮಾಡುತ್ತಿರಲಿಲ್ಲ, ಆ ಕಾಲಕ್ಕೆ ಅವರು ರೆಸ್ಟ್ ಮಾಡುತ್ತಿದ್ದರು, ಬೇರೆಯವರು ಚಾಲನೆ ಮಾಡುತ್ತಿದ್ದರು, ಅವರು ನಿಂತಿದ್ದ ಗಾಡಿಗೆ ಡಿಕ್ಕಿ ಹೊಡೆದು ಅಪಘಾತ

ಮಾಡಿರುತ್ತಾರೆ. ಇನ್ನೊಬ್ಬ ಚಾಲಕ ಯಾರು ಎಂದರೆ ವಲ್ಲಿಜಾನ್. ಆ ಗಾಡಿ ಟೆಂಪೋ ಆಗಿರುತ್ತದೆ. ಅದರ ಕಂಪನಿ ಬಗ್ಗೆ ನನಗೆ ಗೊತ್ತಾಗುವುದಿಲ್ಲ. ನನ್ನ ಗಂಡ ಅಬೀದುಲ್ಲಾಖಾನ್‌ರವರ ಬಳಿ ಕೆಲಸ ಮಾಡುತ್ತಿದ್ದ ಬಗ್ಗೆ ಹಾಗೂ ಸಂಬಳ ಕೊಡುತ್ತಿದ್ದ ಬಗ್ಗೆ ಏನನ್ನೂ ಬರೆಸಿಕೊಂಡು ಬಂದಿರುವುದಿಲ್ಲ. ಮಾಲೂರಿನಿಂದ ತರಕಾರಿಯನ್ನು ಲೋಡ್ ಮಾಡಿಕೊಂಡು ಕಲ್ಕತ್ತಕ್ಕೆ ಹೋಗಿತ್ತು, ಅಲ್ಲಿ ಅನ್‌ಲೋಡ್ ಮಾಡಿ ಹಿಂತಿರುಗುವಾಗ ಆಂಧ್ರದಲ್ಲಿ ಅಪಘಾತವಾಗಿರುತ್ತದೆ. ಗಾಡಿಯಲ್ಲಿ ಮೆಕ್ಯಾನಿಕಲ್ ಡಿಫೆಕ್ಟ್ ಇದ್ದು, ಆ ಕಾರಣಕ್ಕೆ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಘಟನಾ ಸ್ಥಳದಲ್ಲಿ ನನ್ನ ಗಂಡ ಮೃತಪಟ್ಟಿರುತ್ತಾರೆ. ನನ್ನ ಗಂಡ ಚಾಲಕನ ಪಕ್ಕ ಕ್ಯಾಬಿನ್‌ನಲ್ಲಿ ಕುಳಿತಿದ್ದರು. ನನ್ನ ಗಂಡ ಚಾಲಕ ಕೆಲಸ ಮಾಡುತ್ತಿದ್ದ ಬಗ್ಗೆ ಡಿ. ಎಲ್. ಹಾಜರುಪಡಿಸಿರುತ್ತೀರ ಎಂದರೆ ನಾವು ಮನೆ ಶಿಫ್ಟ್ ಮಾಡುವಾಗ ಕಳೆದು ಹೋಗಿರುತ್ತದೆ. ಅಪಘಾತವಾದಾಗ ವಲ್ಲಿಜಾನ್‌ಗೆ ಡಿ. ಎಲ್. ಇರಲಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಡಿ.ಎಲ್. ಇಲ್ಲದೇ ಚಾಲನೆ ಮಾಡಿ ಮುಂದೆ ನಿಂತಿದ್ದ ಗಾಡಿಗೆ ಅಪಘಾತವನ್ನು ಮಾಡಿದ ಕಾರಣ ವಿಮಾ ಕಂಪನಿ ಹಣ ಕೊಡಲು ಭಾದ್ಯತೆ ಇಲ್ಲ ಎಂದರೆ ಸರಿಯಲ್ಲ. ಅಪಘಾತ ಸಂಜೆ 5 ಗಂಟೆಗೆ ಆಗಿರುತ್ತದೆ. ನನ್ನ ಗಂಡ ಕುಳಿತಿದ್ದ ಗಾಡಿಯ ನಂಬರ್ ಹಾಗೂ ಸದರಿ ಗಾಡಿಯು ಮುಂದೆ ನಿಂತಿದ್ದ ಗಾಡಿಯ ನಂಬರ್ ನನಗೆ ಗೊತ್ತಿಲ್ಲ. ನನ್ನ ಗಂಡ ಅಬೀದುಲ್ಲಾಖಾನ್ ಬಳಿ ಕೆಲಸ ಮಾಡುತ್ತಿರಲಿಲ್ಲ ಹಾಗೂ ಪರಿಹಾರ ಕೊಡುವ ಬಾದ್ಯತೆ ಇಲ್ಲ ಎಂದರೆ ಸರಿಯಲ್ಲ.

ಹೆಚ್ಚಿನ ಪರಿಹಾರವನ್ನು ಪಡೆಯಲು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಹಾಗೂ ವಲ್ಲಿಜಾನ್‌ಗೆ ಡಿ.ಎಲ್. ಇಲ್ಲದ ಕಾರಣ ವಿಮಾ ಕಂಪನಿಗೆ ಹಣ ಕೊಡುವ ಬಾದ್ಯತೆ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

**(ಲತಾದೇವಿ ಜಿ.ಎ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.